# ಆ್ಯಪಲ್ ವಿನ್ಯಾಸಕ ಜಾನಿ ಈವ್



ಆ್ಯಪಲ್ ಕಂಪನಿ ಪ್ರಸಿದ್ಧಿ ಗಳಿಸಿದ್ದು ತನ್ನ ಉತ್ಪನ್ನಗಳ ವಿನ್ಯಾಸದಿಂದ. ಆ ವಿನ್ಯಾಸಗಳ ರೂವಾರಿ ಜಾನಿ ಈವ್. 'ಆ್ಯಪಲ್'ನ ಯಶಸ್ಸಿನಲ್ಲಿ 1992ರಿಂದ ಬಹುಮುಖ್ಯ ಪಾತ್ರವಹಿಸಿದ ಜಾನಿ, 27 ವರ್ಷಗಳ ಬಳಿಕ ಕಂಪನಿ ತೊರೆದು ತನ್ನದೇ ವಿನ್ಯಾಸ ಕಂಪನಿ ಪ್ರಾರಂಭಿಸಲು ಹೊರಟಿದ್ದಾರೆ. ಅವರು ವಿನ್ಯಾಸಗೊಳಿಸಿದ ಪ್ರಮುಖ ಉತ್ಪನ್ನಗಳ ಮಾಹಿತಿ ಇಲ್ಲಿದೆ.

■ ಶಶಿಕುಮಾರ್ ಸಿ.

## ಐಮ್ಯಾಕ್ ಜಿ3 (1998)

ಜಾನಿ ಈವ್ ನೇತೃತ್ವದಲ್ಲಿ ಮೊದಲಿಗೆ ಮುನ್ನೆಲೆಗೆ ಬಂದ ವಿನ್ಯಾಸದ ಪ್ರಾಡಕ್ಟ್ ಇದು. 1998ರಲ್ಲಿ ಮಾರುಕಟ್ಟೆಗೆ ಬರುತ್ತಿದ್ದ ಬೇರೆ ಕಂಪ್ಯೂಟರ್‌ಗಳು ಬೂದು ಬಣ್ಣದಲ್ಲಿದ್ದವು. ವಿಭಿನ್ನತೆಯ ಗುರುತಿಗೆ ಬಣ್ಣವೂ ಸಹಕಾರಿ ಎಂದು ಅರಿತ ಜಾನಿ ಈವ್, ಪ್ರಕಾಶಮಾನವಾದ ನೀಲಿಬಣ್ಣದ ಪ್ಯಾನಲ್ (ಹೊರಕವಚ) ಬಳಸಿ ಇದನ್ನು ವಿನ್ಯಾಸಗೊಳಿಸಿದರು. ಒಳಭಾಗ ಕಾಣುವ ಕವಚ, ವಿಶಿಷ್ಟ ಮೌಸ್, ಯುಎಸ್‌ಬಿ ಪೋರ್ಟ್‌ವುಳ್ಳ ಮೊದಲ ಆ್ಯಪಲ್ ಕಂಪ್ಯೂಟರ್ ಇದು.



## ಐಬುಕ್ ಜಿ3 (1999)

ಅರೆಪಾರದರ್ಶಕ ಬಣ್ಣದ ಪ್ಯಾನೆಲ್‌ನೊಂದಿಗೆ ರೂಪಿಸಿದ ಐಬುಕ್ ಜಿ3 ವಿನ್ಯಾಸವು ಆ ಕಾಲಕ್ಕೆ ಸುದ್ದಿ ಮಾಡಿತ್ತು. ಬೇರೆ ಬೇರೆ ಕಂಪನಿಗಳ ಉತ್ಪನ್ನಗಳನ್ನು ಬಳಸುತ್ತಿದ್ದ ಗ್ರಾಹಕರು, ವಿನ್ಯಾಸದ ಒಂದೇ ಕಾರಣಕ್ಕೆ ಐಬುಕ್ ಜಿ3 ಬಳಕೆಯತ್ತ ಮುಖಮಾಡಿದ್ದರು. ಸ್ಲಿಮ್ ಕೇಸ್‌ನಿಂದ ಕೂಡಿದ ಈ ಉತ್ಪನ್ನವನ್ನು ರಬ್ಬರ್ ಹಾಗೂ ಪ್ಲಾಸ್ಟಿಕ್‌ನಿಂದ ರೂಪಿಸಲಾಗಿತ್ತು. 12.1 ಇಂಚಿನಷ್ಟು ಡಿಸ್‌ಪ್ಲೇ ಇದ್ದ ಇದರ ಕೀಬೋರ್ಡ್ ಸಹ ದೊಡ್ಡದು.



## ಐಬುಕ್ ಜಿ4 (2000)

'ಐಬುಕ್ ಜಿ3' ಮಾರುಕಟ್ಟೆಗೆ ಬಂದು ಸದ್ದು ಮಾಡಿದ ನಂತರ ಜಾನಿ ಈವ್ ಮತ್ತೆ ಮುಖಮಾಡಿದ್ದು ಸಾಂಪ್ರದಾಯಿಕ ಲ್ಯಾಪ್‌ಟಾಪ್ ವಿನ್ಯಾಸದತ್ತ. ಅದರ ಪ್ರತಿಫಲವಾಗಿಯೇ ಮಾರುಕಟ್ಟೆಗೆ ಬಂದದ್ದು ಈ 'ಐಬುಕ್ ಜಿ4'. ಗಾಢ ಬಿಳಿ ಬಣ್ಣದ ಪಾಲಿಕಾರ್ಬೊನೆಟ್‌ನಿಂದ ರೂಪುಗೊಂಡಿದ್ದ ಇದು ನೋಡಲು ಬಾಕ್ಸ್ ರೀತಿ ಕಾಣುತ್ತಿತ್ತು. ನಾಲ್ಕೂ ಮೂಲೆಗಳು (ಕಾರ್ನರ್) ಮಡಚಿದ ರೂಪದಲ್ಲಿದ್ದು, ಇದನ್ನು ಕೊಂಡೊಯ್ಯಲು ಸಲೀಸು. ಉತ್ತಮ ದಕ್ಷತೆ ಹೊಂದಿವೆ.



## ಐಪಾಡ್ (2001)

ಮೊದಲ ಎಂಪಿ3 ಪ್ಲೇಯರ್ ರೂಪಕ ಈ ಐಪಾಡ್. ಸಹಜ ಸಾಮಾನ್ಯ ವಿನ್ಯಾಸದ ಈ ಉತ್ಪನ್ನ, ಬಳಕೆಗೆ ಹೆಚ್ಚು ಸಲೀಸಾಗಿತ್ತು. ಪುಟ್ಟ ಡಿಸ್‌ಪ್ಲೇ (ಪರದೆ) ಅದರ ಕೆಳಗೆ ಗುಮ್ಮಟ ಆಕಾರದ ಗುಂಡಿಗಳು, ಗುಂಡಿಗಳ ನಡುವೆ ವೃತ್ತಾಕಾರದ ಮತ್ತೊಂದು ಗುಂಡಿ (ಸ್ಕ್ರಾಲ್ ವೀಲ್) ಐಪಾಡ್‌ನ ವಿನ್ಯಾಸವು ಹಾಗೂ ಈ ಪ್ರಾಡಕ್ಟ್‌ನ ಬಳಕೆ ವಿಧಾನ ಗ್ರಾಹಕರಿಗೆ ಹೊಸ ಅನುಭವ ನೀಡಿತ್ತು. ಸೀಡಿ ಪ್ಲೇಯರ್ ಅನ್ನು ಐಪಾಡ್ ನುಂಗಿದಂತೆ ಐಫೋನ್ ಅಸ್ತಿತ್ವಕ್ಕೆ ಬಂದ ಬಳಿಕ ಐಪಾಡ್‌ಗಳ ತೆರೆಮರೆಗೆ ಸರಿದದ್ದು ವಾಸ್ತವ.

